# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಎಂ.ವೈ.ಎಸ್-1950/2016/ಡಿಆರ್‌ಇ-5

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ:28.3.2017.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರ ಅನ್ವಯ ವರದಿ

ವಿಷಯ: ಶ್ರೀ.ಟಿ.ಪಿ.ರಮೇಶ್, ನಂ: 47, ಸಿ.ಪಿ.ಆರ್.ಐ. ಕಾಲೋನಿ, ಹೊಸ ಬಿ.ಇ.ಎಲ್. ರಸ್ತೆ, ಬೆಂಗಳೂರು ಅವರು ಸಲ್ಲಿಸಿದ ದೂರಿನ ಕುರಿತು.

****

ಶ್ರೀ.ಟಿ.ಪಿ.ರಮೇಶ್, ನಂ: 47, ಸಿ.ಪಿ.ಆರ್.ಐ. ಕಾಲೋನಿ, ಹೊಸ ಬಿ.ಇ.ಎಲ್. ರಸ್ತೆ, ಬೆಂಗಳೂರು (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ), ಇವರು ಶ್ರೀ.ಸುನಿಲ್, ಗ್ರಾಮ ಲೆಕ್ಕಾಧಿಕಾರಿ, ಚಿಕ್ಕೊಂಡುಗುಳ ವೃತ್ತ, ಹಾಸನ ತಾಲ್ಲೂಕು ಕಸಬಾ ಹೋಬಳಿ, ಹಾಸನ ಜಿಲ್ಲೆ ಮತ್ತು ಶ್ರೀಮತಿ.ಜಯಲಕ್ಷ್ಮಮ್ಮ.ಕೆ.ಜಿ., ವಿಷಯ ನಿರ್ವಾಹಕರು, ತಾಲ್ಲೂಕು ಕಛೇರಿ, ಹಾಸನ, (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಸಲ್ಲಿಸಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ.9ರಡಿಯಲ್ಲಿ ತನಿಖೆಗಾಗಿ ಕೈಗೆತ್ತಿಕೊಳ್ಳಲಾಯಿತು.

2. ದೂರುದಾರರು ತಮ್ಮ ದೂರಿನಲ್ಲಿ, ಕಮಲಾಪುರ ಗ್ರಾಮದಲ್ಲಿ ಪುಟ್ಟಯ್ಯ ಇವರು ದಿ: 14.3.2001ರಂದು ಮರಣಹೊಂದಿದ್ದು ಇವರ ಮರಣ ಪ್ರಮಾಣ ಪತ್ರವನ್ನು ಗ್ರಾಮ ಲೆಕ್ಕಾಧಿಕಾರಿಗಳಿಂದ ಪಡೆದಿದ್ದೇನೆ. ಕೋರ್ಟಿನಲ್ಲಿ ನೀಡುವ ಸಲುವಾಗಿ ಇನ್ನೊಂದು ಮರಣ ಪ್ರಮಾಣ ಪತ್ರವನ್ನು ಕೋರಿ ತಹಶೀಲ್ ಕಛೇರಿಗೆ ಅರ್ಜಿ ಸಲ್ಲಿಸಿದಾಗ ನಮ್ಮ ತಂದೆ ಮತ್ತು ತಾತನ ಹೆಸರನ್ನು ಸರಿಯಾಗಿ ನಮೂದಿಸಿರಲಿಲ್ಲ ತಾಲ್ಲೂಕು ಕಛೇರಿಯ ವಿತರಕರಲ್ಲಿ ಕೇಳಿದಕ್ಕೆ ನಮ್ಮ ವಿ.ಎ., ರವರಿಂದ ಬರೆಸಿ ತನ್ನಿ ಅಂತ ಹೇಳಿದ್ದು ಶ್ರೀ.ಸುನೀಲ್ ವಿ.ಎ., ರವರನ್ನು ಕೇಳಿದಾಗ ನ್ಯಾಯಾಲಯದಲ್ಲಿ ಅಪೀಲು ಮಾಡಲು ತಿಳಿಸುತ್ತಿದ್ದಾರೆ. ಇವರ

ತಪ್ಪಿನಿಂದ ನನಗೆ ತೊಂದರೆಯಾಗಿದೆ. ಎದುರುದಾರರ ವಿರುದ್ಧ ಕ್ರಮ ಕೈಗೊಳ್ಳುವಂತೆ ಮತ್ತು ಮರಣ ಪ್ರಮಾಣ ಪತ್ರವನ್ನು ಸರಿಪಡಿಸಿಕೊಳ್ಳುವಂತೆ ಕೋರಿದ್ದಾರೆ.

3. ಈ ದೂರಿನ ಮೇಲೆ ಎದುರುದಾರರಿಂದ ಆಕ್ಷೇಪಣೆಗಳನ್ನು ಕೇಳಲಾಗಿದೆ. 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದಿ: 5.5.2015ರಿಂದ ಚಿಕ್ಕಕೊಂಡಗೊಳ ವೃತ್ತದಲ್ಲಿ ಕೆಲಸ ಮಾಡುತ್ತಿದ್ದು ತಮಲಾಪುರ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿದಾಗ ದೂರುದಾರರ ತಂದೆ ಪುಟ್ಟಯ್ಯ ಬಿನ್ ಲಕ್ಕಯ್ಯ 14.3.2001ರಂದು ಮೌತಿಯಾಗಿರುತ್ತಾರೆ ಇವರ ಮರಣ ಪ್ರಮಾಣ ಪತ್ರವನ್ನು ಪಿ.ಎನ್.ಚಿಕ್ಕೇಗೌಡ ಇವರು ದೃಢೀಕರಿಸಿಕೊಟ್ಟಿದ್ದಾರೆ. 1 ವರ್ಷದ ಅವಧಿ ಮುಗಿದ ನಂತರ ಮೂಲ ವಹಿ ನಮೂನೆ ನಂ:2ರಲ್ಲಿ ತಂದೆ ಹೆಸರು ನಮೂದಿಸಿದ್ದು ಸೇರಿಸಿ ನೊಂದಣಿ ಮಾಡಿರಲಿಲ್ಲ ಕಛೇರಿಗೆ ಕೊಟ್ಟಿರುವ ವಹಿಯಲ್ಲಿ ತಂದೆಯ ಹೆಸರು ನಮೂದಿಸಿರಲಿಲ್ಲ ನನ್ನ ಮೇಲೆ ವಿನಾಕಾರಣ ದೂರು ಸಲ್ಲಿಸಿದ್ದಾರೆ. ತಾಲ್ಲೂಕು ಕಛೇರಿಯಿಂದ ವಹಿಯಲ್ಲಿ ನಮೂದಿಸಿರುವ ಮಾಹಿತಿಯಲ್ಲಿ ಮರಣ ದೃಢೀಕರಣ ಪತ್ರ ನೀಡಲಾಗಿದೆ. ಮೂಲ ವಹಿಯಲ್ಲಿ ತಂದೆಯ ಹೆಸರು ಸೇರಿಸಲು ನನಗೆ ಯಾವುದೇ ಅಧಿಕಾರ ಇಲ್ಲ. ಸೂಕ್ತ ದಾಖಲೆಗಳನ್ನು ನೀಡಿದಲ್ಲಿ ಮೂಲ ವಹಿಯಲ್ಲಿ ಕಲಂ 18ರಂತೆ ಕ್ರಮ ಕೈಗೊಳ್ಳಲಾಗುವುದು ನಾನು ನಿಯಮಾನುಸಾರ ಕರ್ತವ್ಯ ನಿರ್ವಹಿಸಿದ್ದೇನೆ.

4. 2ನೇ ಎದುರುದಾರರು ಕಲಂ 15ರಡಿಯಲ್ಲಿ ದೂರುದಾರರು ಮೃತವ್ಯಕ್ತಿಯ ತಂದೆಯ ಹೆಸರು ಸೇರಿಸಲು ಸೂಕ್ತ ದಾಖಲೆಗಳನ್ನು ನೀಡಿದ್ದಲ್ಲಿ ಜನನ ಮರಣ ನೊಂದಣಿ ಕಾಯಿದೆ ಕಲಂ 15ರಂತೆ ಹೆಸರು ಸೇರಿಸಿಕೊಡಲಾಗುವುದು ಅಂತ

5. ಈ ಆಕ್ಷೇಪಣೆಗಳ ಮೇಲೆ ದೂರುದಾರರ ಪ್ರತ್ಯುತ್ತರ ಕೇಳಲಾಗಿ 1ನೇ ಎದುರುದಾರರು ಗ್ರಾಮಕ್ಕೆ ಭೇಟಿ ಕೊಟ್ಟಿಲ್ಲ ಕಲಂ 15ಅಡಿಯಲ್ಲಿ ಸರಿಪಡಿಸಿಕೊಂಡು ಮರಣ ಪ್ರಮಾಣ ಪತ್ರ ಕೊಟ್ಟಿಲ್ಲ ನಾನು ಸಲ್ಲಿಸಿರುವ 2 ಪ್ರಮಾಣ ಪತ್ರಗಳ ಪ್ರಕಾರ ಒಂದರಲ್ಲಿ ತಂದೆ ಹೆಸರು ಇದೆ ಇನ್ನೊಂದರಲ್ಲಿ ಇಲ್ಲ ಆದ್ದರಿಂದ ವಿಚಾರಣೆ ಮಾಡಲು ಕೋರಿಕೊಳ್ಳುತ್ತೇನೆ.

6. ಈ ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಿದ್ದೇನೆ. ಸರ್ಕಾರಿ ಸುತ್ತೋಲೆಯ ಪ್ರಕಾರ ಎದುರುದಾರರಿಗೆ ತಿದ್ದುಪಡಿ ಮಾಡಲು ಅಧಿಕಾರವಿದೆ, ಪ್ರತಿ ಪ್ರಕರಣದಲ್ಲೂ ನ್ಯಾಯಾಲಯದ ಆದೇಶ ತರಬೇಕಿಲ್ಲ, ಪಿ.ಡಿ.37, ಎಸ್.ಎಂ.ಸಿ.2012 ದಿ.2.5.2012ರ ಸುತ್ತೋಲೆಯಂತೆ ಎದುರುದಾರರಿಗೆ ಮರಣ ಪ್ರಮಾಣಪತ್ರದಲ್ಲಿ ತಿದ್ದುಪಡಿ

ಮಾಡಿಕೊಡಲು ಅವಕಾಶವಿದೆ. ದೂರುದಾರರಿಗೆ ಸಮಸ್ಯೆ ಎಲ್ಲಿ ಇದೆ ಎನ್ನುವುದೇ ಅರ್ಥವಾಗಿಲ್ಲ ಈ ಹಿಂದಿನ ಗ್ರಾಮ ಲೆಕ್ಕಾಧಿಕಾರಿ ಪಿ.ಎನ್.ಚಿಕ್ಕೇಗೌಡ ಎನ್ನುವವರು ನಿವೃತ್ತಿ ಹೊಂದುವ ಮುನ್ನ ದೂರುದಾರರಿಗೆ ಮರಣ ಪ್ರಮಾಣ ಪತ್ರ ಕೊಟ್ಟಿದ್ದು ಮೂಲ ವಹಿಯಲ್ಲಿ ಮಾತ್ರ ತಂದೆಯ ಹೆಸರು ನಮೂದಿಸಿಲ್ಲ ಹೀಗಿರುವಾಗ ದೂರುದಾರರು ತನ್ನ ತಂದೆಯ ತಂದೆ ಲಕ್ಕಯ್ಯ ಅಂತ ತೋರಿಸಲು ಯಾವುದೇ ಸರ್ಕಾರಿ ದಾಖಲೆಯನ್ನು ಹಾಜರುಪಡಿಸಿ ಕಲಂ 15 ಜನನ ಮರಣ ನೊಂದಣಿ ಕಾಯಿದೆ ಅಡಿಯಲ್ಲಿ ತಿದ್ದುಪಡಿಗಾಗಿ ಅರ್ಜಿ ಸಲ್ಲಿಸಿದಲ್ಲಿ ತಿದ್ದುಪಡಿಗಳನ್ನು ಮಾಡಿಕೊಡುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಎದುರುದಾರರಿಗೆ ನಿರ್ದೇಶನ ನೀಡಲು ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

7) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

28/3/17.

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.